10) ಪ್ರಕಟಣೆ

ವಿಷಯ :- ರಾಜ್ಯದಲ್ಲಿರುವ ಕಬ್ಬು ಬೆಳೆಗಾರರ ಸಮಸ್ಯೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಏರ್ಪಡಿಸಿರುವ ಬಗ್ಗೆ.

ಅಧ್ಯಕ್ಷರು :- ರಾಜ್ಯದಲ್ಲಿ ಇನ್ನೂ ನುರಿಸಬೇಕಾಗಿರುವ ಕಬ್ಬಿನ, ಕಬ್ಬು ಬೆಳೆಗಾರರ ಮತ್ತು ಸಕ್ಕರೆ ಉದ್ದಿಮೆಯು ಎಉದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಗುರುವಾರ ದಿನಾಂಕ 12-04-07 ರಂದು ಸಂಜೆ 5 : 00 ಗಂಟೆಗೆ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಂಬಂಧಪಟ್ಟ ಮಾನ್ಯ ಶಾಸಕರು, ಕಬ್ಬು ಬೆಳೆಗಾರರು, ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಭೆಯನ್ನು ಏರ್ಪಡಿಸಿರುತ್ತಾರೆ.

ಸದರಿ ಸಭೆಯಲ್ಲಿ ಸಂಬಂಧಪಟ್ಟ ಮಾನ್ಯ ವಿಧಾನ ಸಭಾ ಸದಸ್ಯರು ಭಾಗವಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ವಿನಂತಿಸಿರುತ್ತಾರೆ.

11. ಶಾಸನ ರಚನೆ

(ಅ) ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2007 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, 2007 ರ ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಉಪಾಧ್ಯಕ್ಷರೆ, ಈ ಒಂದು ಕಾನೂನನ್ನು 2003 ನೇ ಇಸವಿಯಲ್ಲಿ ಅವತ್ತಿನ ಸರ್ಕಾರ ತೆಗೆದುಕೊಂಡು ಬಂದಿತ್ತು. ಈ ಸ್ಟಾಂಪುಗಳು ಮತ್ತು ಮುದ್ರಾಂಕ ಕಾಗದಗಳ ಬಳಕೆಯನ್ನು ರದ್ದುಗೊಳಿಸಿ ಸ್ಟಾಂಪುಗಳನ್ನು ಬಳಸಲಾಗುವುದೆಂದು 2003-2004 ರಲ್ಲಿ ಅವತ್ತಿನ ಸರ್ಕಾರದಲ್ಲಿ ಸನ್ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದು, ಅವರು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ ಪ್ರಕಾರ 28-03-2003 ರಂದು ಕರ್ನಾಟಕ ವಿಧಾನ ಸಭೆಯಲ್ಲಿ ಹಾಗೂ 29-03-2003 ರಂದು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಕರ್ನಾಟಕ ಮುದ್ರಾಂಕ (ತಿದ್ದುಪಡಿ) 2003 ನ್ನು ಅನುಮೋದಿಸಲಾಗಿದೆ. ಅವತ್ತೆ ಈ ಬಿಲ್ ಅನ್ನು ಪಾಸ್

ಮಾಡಿದರು. ಆದರೆ ಅದರಲ್ಲಿ ಸೆಕ್ಷನ್ 19 ರಲ್ಲಿ ನಾವೊಂದು ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೇವೆ, ಈಗ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಕೇಂದ್ರ ಸರ್ಕಾರದಲ್ಲಿ ಸೆಕ್ಷನ್ 19 ಕ್ಕೆ ಅಬ್ಜೆಕ್ಷನ್ ಮಾಡಿದರು. ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿ ಅದನ್ನು ನಮೂದಿಸಲಾಗಿದೆ. ಭಾರತ ಸರ್ಕಾರವು ತಮ್ಮ ಪತ್ರ ದಿನಾಂಕ 17–20 ಜುಲೈ 2003, ದಿನಾಂಕ 18–10–2004 ರ ಮೂಲಕ ಸ್ಪಷ್ಟೀಕರಣ ಕೋರಿ ಕಾನೂನು ಮತ್ತು ನ್ಯಾಯ ಮಂತ್ರಾಲಯದ (ಕಾನೂನು ವ್ಯವಹಾರಗಳ ಇಲಾಖೆ) ಟಿಪ್ಪಣಿಗಳನ್ನು ಕಳುಹಿಸಿರುತ್ತದೆ. ಭಾರತ ಸರ್ಕಾರದ ಪತ್ರ ದಿನಾಂಕ 11–07–2003 ರ ಮೂಲಕ ತಿಳಿಸಿದಂತೆ ಭಾರತ ಸರ್ಕಾರದ ವಿತ್ತ ಮಂತ್ರಾಲಯ (ಬ್ಯಾಂಕಿಂಗ್ ವಿಭಾಗ) ದ ಅಭಿಪ್ರಾಯಗಳನ್ನು ಮತ್ತು ನ್ಯಾಯ ಮಂತ್ರಾಲಯವು (ಕಾನೂನು ವ್ಯವಹಾರಗಳ ಇಲಾಖೆ) ಎತ್ತಿದ ಅಂಶಗಳನ್ನು ಕರ್ನಾಟಕ ಸರ್ಕಾರವು ಪರಿಗಣಿಸಿದೆ ಮತ್ತು ಕರ್ನಾಟಕ ಸ್ಟಾಂಪು ಅಧಿನಿಯಮ, 1957 ರ 19 ನೇ ಪ್ರಕರಣಕ್ಕೆ ಮಾಡಲಾಧ ಪ್ರಸ್ತಾವಿಕ ತಿದ್ದುಪಡಿಯನ್ನು ಕೈಬಿಡಲು ನಿರ್ಧರಿಸಿದೆ. ಕೇಂದ್ರ ಸರ್ಕಾರ ಏನೊಂದು ಸೂಚನೆಯನ್ನು ಕೊಟ್ಟಿದ್ದಾರೆ, ಅಂದರೆ ಬೇರೆ ರಾಜ್ಯದಲ್ಲಿರುವ ವ್ಯಕ್ತಿಗಳು ಇಲ್ಲಿ ಯಾವುದೇ ಒಂದು ವ್ಯವಹಾರ ಮಾಡುವ ಸಂದರ್ಭದಲ್ಲಿ ಆ ರಾಜ್ಯದಲ್ಲೇನು ಸ್ಟಾಂಪ್ ಡ್ಯೂಟಿಯನ್ನು ತೆಗೆದುಕೊಂಡಿರುತ್ತಾರೆ, ದುಡ್ಡು ಕೊಟ್ಟು ಡಾಕ್ಯುಮೆಂಟ್ ರೆಡಿಮಾಡಿಕೊಂಡು ಇಲ್ಲಿ ಬಂದಿರುತ್ತಾರೆ, ಅಲ್ಲಿ ಎಕ್ಸಿಕ್ಯುಟ್ ಮಾಡಿಕೊಂಡು ಇಲ್ಲಿ ನೋಂದಾವಣಿಗೆ ಬಂದಾಗ, ನಮ್ಮ ಕರ್ನಾಟಕದಲ್ಲೇನು ಸ್ಟಾಂಪ್ ಡ್ಯೂಟಿ ಇದೆ ಅದನ್ನು ತುಂಬಬೇಕು ಎನ್ನುವುದು ಸೆಕ್ಷನ್ 19 ರಲ್ಲಿ ನಮ್ಮ ತಿದ್ದುಪಡಿ ಇತ್ತು. ಹೀಗಾಗಿ ಕೇಂದ್ರ ಸರ್ಕಾರ ಏನು ಅಭಿಪ್ರಾಯಪಟ್ಟಿತ್ತೆಂದರೆ, ಇವತ್ತು ಅಲ್ಲಿನವರು ಸ್ಟಾಂಪ್ ಡ್ಯೂಟಿಯನ್ನು ತುಂಬಿರುತ್ತಾರೆ. ನಿಮ್ಮಲ್ಲೇನಾದರೂ ಸ್ವಲ್ಪ ಹೆಚ್ಚುಕಡಿಮೆಯಾದರೆ, ಅದು ಸರ್‌ಪ್ಲಸ್ ಇದ್ದರೆ ನೀವು ತೆಗೆದುಕೊಳ್ಳಬಹುದು ಮತ್ತೆ ಅಡಿಷನಲ್ ಆಗಿ ನೀವು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ಏಕ ರೂಪದಲ್ಲಿರಬೇಕೆಂದು ಒಂದು ಸಲಹೆಯನ್ನು ಕೊಟ್ಟಿದ್ದರಿಂದ ಇವತ್ತು ನಾವು ಸೆಕ್ಷನ್ 19 ರಲ್ಲಿರುವುದನ್ನು ತಿದ್ದುಪಡಿ ಮಾಡಿದ್ದೇವೆ, ಅದನ್ನು ವಾಪಸ್ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಈಗ ತಾವೇನು ಸೆಕ್ಷನ್ 19 ಅನ್ನು ಉಲ್ಲೇಖಿ ಮಾಡಿ ಈ ತಿದ್ದುಪಡಿಯನ್ನು ತಂದಿದ್ದೀರಿ, ಸೆಕ್ಷನ್ 19 ಅನ್ನು ಡ್ರಾಪ್ ಮಾಡಬೇಕೆಂದು ಕೇಂದ್ರ ಸರ್ಕಾರದಿಂದ ಸಲಹೆ ಬಂದಿದೆ ಎಂದು ಹೇಳಿದಿರಿ

ಆಯಿತು. ಆದರೆ ಸೆಕ್ಷನ್ 19 ಏನೆಂಬುದನ್ನು ಇಲ್ಲಿ ತೋರಿಸಿಲ್ಲ. ಅದಕ್ಕೆ ನಾನು ಮೊನ್ನೆ ಹೇಳಿದ್ದು, ಪ್ರತಿಯೊಂದನ್ನು ಅಲ್ಲಿ ನೀವು ಉಲ್ಲೇಖಿಸಿದರೆ, ನಮಗೆ ಓದಿಕೊಂಡು ಬರುವುದಕ್ಕೆ ಸ್ವಲ್ಪ ಸುಲಭವಾಗುತ್ತದೆ. ಇದರಲ್ಲಿ ಎಲ್ಲೂ ಉಲ್ಲೇಖಿಸಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅಬ್ಜೆಕ್ಷನ್ ಆಗಿ ಹಿಂದಕ್ಕೆ ಬಂದು ನೀವು ರೆಕ್ಟಿಫೈ ಮಾಡಿದ್ದಿರೆಂದರೆ, ಇಲ್ಲಿ ಆ ಮಾಹಿತಿಯನ್ನು ಕೊಡಬೇಕು. ಅವರೇನು ತಕರಾರು ತೆಗೆದರು? ಕಾನೂನು ನ್ಯಾಯ ಮಂತ್ರಾಲಯ ವಾಪಸ್ ಕಳುಹಿಸಿತ್ತು, ನಾವು ಅದನ್ನು ಸ್ಯಾಟಿಸ್‌ಫೈ ಮಾಡಿ ಬಿಲ್ ತಂದಿದ್ದೇವೆಂದು ಅಷ್ಟನ್ನು ಹೇಳುತ್ತೀರಿ, what was that objection? ಹೌಸ್ ಗೆ ಗೊತ್ತಾಗಬೇಕಲ್ಲ.

ಶ್ರೀ ಜಗದೀಶ್ ಶೆಟ್ಟರ್ :– 2003 ರಲ್ಲೇನು ಆ್ಯಕ್ಟ್ ಇತ್ತು ಈಗಾಗಲೇ ಅದು ಇದೆ, ಅದರಲ್ಲಿ ಸೆಕ್ಷನ್ 19 ರಲ್ಲಿ ಕೆಲವೊಂದು ವಿಷಯಗಳನ್ನು ಸೇರ್ಪಡೆ ಮಾಡಿದ್ದೇವು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಇದರಲ್ಲಿ 19 ಸೆಕ್ಷನ್ ಏನು ಎಂದು ಎಲ್ಲಿ ಹೇಳಿದ್ದೀರಿ?

ಶ್ರೀ ಜಗದೀಶ್ ಶೆಟ್ಟರ್ :– ನಮ್ಮಲ್ಲಿ ಕಾನೂನು ಇದೆ, ಆ ಕಾಪಿಯನ್ನು ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಮಗೆ ಕೊಡಬೇಕಲ್ಲ, ಇಲ್ಲಿ ಬರಬೇಕಲ್ಲ, ಸನ್ಮಾನ್ಯ ಮಂತ್ರಿಗಳೇ, what is the existing clause?

ಶ್ರೀ ಜಗದೀಶ್ ಶೆಟ್ಟರ್ :– ಈಗಾಗಲೇ ವಿಧಾನ ಪರಿಷತ್ತಿನಲ್ಲಿ ಏನೊಂದು ಬಿಲ್, ಕಾನೂನು ಪಾಸ್ ಆಗಿದೆ, ಅದು ಕಾನೂನಾಗಿದೆ, ಅದು ಕೇಂದ್ರ ಸರ್ಕಾರಕ್ಕೆ ಹೋಗಿತ್ತು, ತಮಗೆ ಬೇಕಾದರೆ ಆ ಕಾಪಿಯನ್ನು ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅನುಬಂಧದಲ್ಲಿ ತಾವು ಸ್ಪಷ್ಟವಾಗಿ existing provision of the Act ಅನ್ನು ಹಾಕಿ ಏನು ತಿದ್ದುಪಡಿ ಮಾಡುತ್ತೀರಿ, ನಾವು ಮೊದಲು, Act ಏನಾಗಿದೆ, ನೀವು ಏನು ತಿದ್ದುಪಡಿ ಮಾಡುತ್ತಿದ್ದಿರೆಂದು ಹಿಂದುಗಡೆ ಓದುತ್ತೇವೆ, ನಾನು ಜಯಪ್ರಕಾಶ್ ಹೆಗ್ಡೆಯವರಿಗೆ whre is Section 19 in this Bill ಎಂದು ಕೇಳಿದೆ. ನೀವು ಇಲ್ಲಿ ಸೆಕ್ಷನ್ 19 ಅನ್ನು ಹೇಳಿಬಿಟ್ಟಿರಿ, ಸೆಕ್ಷನ್ 19 ಬಗ್ಗೆ ಈ ಬಿಲ್‌ನಲ್ಲಿ ಮಾಹಿತಿ ಇಲ್ಲ. ಎರಡನೆಯದು,

ರಾಷ್ಟ್ರಪತಿಯವರು ಹಿಂದಕ್ಕೆ ಹಾಕಿದರೆಂದು ಹೇಳಿದಿರಿ, Constitution problem ಏನಿತ್ತು, ರಾಷ್ಟ್ರಪತಿಯವರು ಏತಕ್ಕೆ ಹಿಂದಕ್ಕೆ ಹಾಕಿದರು, ಈಗ ತಾವೇನು ರೆಕ್ಟಿಫೈ ಮಾಡಿದ್ದಿರೆಂಬುದನ್ನು ನಮಗೆ ಹೇಳಬೇಕಲ್ಲವೇ? ಇದೊಂದು ಶಾಸನವಾದುದರಿಂದ, ರೆಕಾರ್ಡ್ ಇವೆಲ್ಲಾ ಬರಬೇಕಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ :– ಈಗಾಗಲೇ, 2003 ರಲ್ಲಿ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗಿ ಈ ವಿಧೇಯಕ ಪಾಸ್ ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಪಾಸ್ ಆಗಿದ್ದು ರಿಜೆಕ್ಟ್ ಆಗಿದೆ ಎಂದರೆ, it must be in contradiction with the Central Act ಎಂದು ನಾವು ತಿಳಿದುಕೊಳ್ಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ರಾಷ್ಟ್ರಪತಿಯವರ ಕಛೇರಿಯಿಂದ ಅದು ಹಿಂದಕ್ಕೆ ಹೋಗಿತ್ತು ಎಂದರೆ, ಸಂವಿಧಾನದ ಪ್ರಾವಿಷನ್‌ನಿಂದ ಆ ಬಿಲ್ ಆಚೆ ಇತ್ತು, ಅಥವಾ ಯಾವುದಾದರೂ Central Act Provision ನಿಂದ ಆಚೆ ಇತ್ತು. ಆ ಮಾಹಿತಿ ನಮಗೆ ಬೇಕು. ಆ ಮಾಹಿತಿ ಏನು ಎಂದು ಈ ಶಾಸನ ಸಭೆಗೆ ತಿಳಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ :– ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸ್ಟಾಂಪ್ ಅಮೆಂಡ್‌ಮೆಂಟ್ ಬಿಲ್ 2003, 2003 ರಲ್ಲಿ ಪಾಸಾಗಿತ್ತು. ಅದರ ಕಾಪಿಯನ್ನು ನಾನು ತಮಗೆ ಸಪ್ಲೈ ಮಾಡುತ್ತೇನೆ. 2003 ರಲ್ಲಿ ಈ ಬಿಲ್ಲು ವಿಧಾನ ಸಭೆಯಲ್ಲಿ ಹಾಗೂ ವಿಧಾನ ಪರಿಷತ್ತಿನಲ್ಲಿ ಪಾಸಾಯಿತು. ಅವತ್ತಿನ ಸರ್ಕಾರ ಸ್ಟಾಂಪ್ ಪೇಪರ್‌ಗಳನ್ನು ಮಾರಾಟ ಮಾಡಬಾರದು ಎಂದು ನಿರ್ಣಯ ತೆಗೆದುಕೊಂಡು, Documents ಸೇಲ್ಸ್ ಪ್ರಾರಂಭವಾಯಿತು, ಚಲನ್ ತುಂಬುವುದು ಪ್ರಾರಂಭವಾಯಿತು. 2003 ರಲ್ಲಿ ಅವತ್ತಿನ ಸರ್ಕಾರ ಏನು ಕಾನೂನು ಮಾಡಿದರು, ತೆಲಗಿ ಸ್ಟಾಂಪ್ ಪೇಪರ್ ಹಗರಣ ಆದ ಮೇಲೆ ಅದನ್ನು ಬ್ಯಾನ್ ಮಾಡಿದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಮತ್ತು ನಾವು ಕೇಳುವುದು ಇಷ್ಟೆ. ಸೆಕ್ಷನ್ 19 ಇಲ್ಲಿ ಏಕೆ ತರಲಿಲ್ಲ? ಏನಾಯಿತು? ಅಲ್ಲಿಂದ ಏಕೆ ವಾಪಸ್ ಕಳುಹಿಸಿದರು? ಅದನ್ನೆಲ್ಲಾ clear ಆಗಿ ಇದರಲ್ಲಿ mention ಮಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನೀವು ಬಿಲ್ ತಂದಿದ್ದೀರಿ. ಧ್ಯೇಯೋದ್ದೇಶಗಳಲ್ಲಿ ನೀವು ಹೇಳಿರತಕ್ಕಂತಹ ವಿಚಾರ ಏನಿದೆ, ಅದಕ್ಕೆ ಬಿಲ್ ಪೂರಕವಾಗಿರಬೇಕು. ಧ್ಯೇಯೋದ್ದೇಶಗಳಲ್ಲಿ ನೀವು ಏನು ಹೇಳಿದ್ದೀರಿ, 19 ನೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಂದು ಒಂದು ವಿಚಾರವನ್ನು ಹೇಳಿದ್ದೀರಿ. 2003 ರಲ್ಲಿ ಬಿಲ್ ಪಾಸಾಗಿತ್ತು. ಆ ಬಿಲ್ ಕೇಂದ್ರಸರ್ಕಾರಕ್ಕೆ ರಾಷ್ಟ್ರಪತಿಯವರ ಬಳಿ ಹೋಗಿತ್ತು. ಅವರು 18–10–2004 ರಲ್ಲಿ ಸ್ಪಷ್ಟೀಕರಣ ಕೋರಿ ಅದನ್ನು ವಾಪಸ್ ಕಳುಹಿಸಿದ್ದರು. ಅವರು ಏನು ಸ್ಪಷ್ಟೀಕರಣ ಕೇಳಿದ್ದರು? ಯಾವ aspect ಮೇಲೆ ಅವರು ನಿಮ್ಮನ್ನು clarification ಕೇಳಿದ್ದರು? ಏಕೆಂದರೆ, ರಾಷ್ಟ್ರಪತಿಯವರು ಬಿಲ್ಲನ್ನು ವಾಪಸ್ ಕಳುಹಿಸಬೇಕಾದರೆ, ಎರಡು ಪಾಯಿಂಟ್‌ಗಳು ಇರುತ್ತವೆ. ಒಂದು It should be against the Constitutional Provision or it may be Central Act ಮೇಲೆ overriding ಆಗಿರಬೇಕು. ಆ ಎರಡು ಕಾರಣಗಳಿಂದ ಬಿಲ್ ವಾಪಸ್ ಬರಲಿಕ್ಕೆ ಸಾಧ್ಯತೆ ಇದೆ. ಕೇಂದ್ರ ಸರ್ಕಾರದವರು ಯಾವ ಆಧಾರದ ಮೇಲೆ ಅದನ್ನು ವಾಪಸ್ ಕಳುಹಿಸಿದರು ಎನ್ನತಕ್ಕಂಥದ್ದರ ಬಗ್ಗೆ ಸ್ಪಷ್ಟೀಕರಣ ಬೇಕು. ಸೆಕ್ಷನ್ 19 ನೀವು ಏನು ಹೇಳಿದ್ದೀರಿ, ಆ ಸೆಕ್ಷನ್ ಬಗ್ಗೆ ನೀವು clarification ಕೊಡಬೇಕು. ಏಕೆಂದರೆ ಇದು ಹಿಂದೆ ಪಾಸಾಗಿರತಕ್ಕಂತಹ ಬಿಲ್ ವಪಸ್ ಬಂದಿದೆ. ವಾಪಸ್ ಬರಬೇಕಾದರೆ There must be a valid reason. Otherwise, the Central Government or President of India cannot send it back. ಅದರ ಬಗ್ಗೆ ನೀವು clarification ಹೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ಅದು ಈ ಸಭೆಯ Property ಆಗಬೇಕು. Governor ಯಾವುದಾದರೂ ಬಿಲ್ಲನ್ನು ರಿಜೆಕ್ಟ್ ಮಾಡಿದರೆ, ರಾಷ್ಟ್ರಪತಿಯವರು ಯಾವುದಾದರೂ ಬಿಲ್ಲನ್ನು ರಿಜೆಕ್ಟ್ ಮಾಡಿದರೆ ತಾವು ಬಂದು ಈ ಸಭೆಯಲ್ಲಿ ಹೇಳಬೇಕಾಗುತ್ತದೆ. Why that bill has been refused by the Hon'ble President of India ಎಂದು ಹೇಳಬೇಕಾಗುತ್ತದೆ. ನೀವು ಸದನದಲ್ಲಿ ಅನೌನ್ಸ್ ಮಾಡಬೇಕಾಗುತ್ತದೆ. ಈ ಶಾಸನ ಸಭೆ ಪಾಸು ಮಾಡಿರುವ ಇಂತಹ ಬಿಲ್ಲನ್ನು ರಾಷ್ಟ್ರಪತಿಯವರು ಈ ಕಾರಣಕ್ಕಾಗಿ ನಿರಾಕರಿಸಿದ್ದಾರೆ ಎಂದು ತಾವು ಎಂದಾದರೂ ಹೇಳಿದ್ದೀರಾ? Is it placed on record? President of India reject ಮಾಡಲಿಕ್ಕೆ ಏನು ಕಾರಣ ಎಂದು ಗೊತ್ತಾಗದೇ ಕುರುಡರ ಹಾಗೆ ಕುಳಿತು ಬಿಲ್ ಪಾಸ್ ಮಾಡುವುದಕ್ಕಾಗುತ್ತದಾ? Explanation is not required.

ಶ್ರೀ ಜಗದೀಶ್ ಶೆಟ್ಟರ್ :– ನಾನು ಹೇಳುತ್ತೇನೆ. ಒಂದು ಕಾಪಿಯನ್ನು ನಾನು ನಿಮಗೆ ಸಪ್ಲೈ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನೀವು ಅದನ್ನು ಸಪ್ಲೈ ಮಾಡಿ. ಆ ಮೇಲೆ ಪಾಸ್ ಮಾಡೋಣ. ಅಲ್ಲಿಯವರೆಗೆ ಬೇರೆ ಬಿಲ್ ಇದ್ದರೆ ಪಾಸ್ ಮಾಡೋಣ. ದಯಮಾಡಿ ಸಹಾಯ ಮಾಡಿ, ನೀವು ಅರ್ಧಗಂಟೆ ಸಮಯ ತೆಗೆದುಕೊಳ್ಳಿ, ಅಷ್ಟರೊಳಗೆ ಬೇರೆ ಬಿಲ್ ಮೂವ್, ಮಾಡಿ.

ಶ್ರೀ ಜಗದೀಶ್ ಶೆಟ್ಟರ್ :– ಹಿಂದಿನ ಬಿಲ್ 2003 ರಲ್ಲಿ ನಾವು ಏನು ಬಿಲ್ ಪಾಸ್ ಮಾಡಿದ್ದೆವು, ಅದರ ಕಾಪಿಯನ್ನು ನಾನು ಕೊಡಿಸುತ್ತೇನೆ. ಅದರಲ್ಲಿ ಸೆಕ್ಷನ್ 19 ಇದೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :– ಕಾಪಿ ಕೊಡಿಸುವುದರ ಜೊತೆಗೆ ರಾಷ್ಟ್ರಪತಿಯವರು ಬಿಲ್ ವಾಪಸ್ ಕಳುಹಿಸುವುದಕ್ಕೆ ಕಾರಣವೇನೆಂದು ಬೇಕು. That has to be placed before the House.

ಶ್ರೀ ಜಗದೀಶ್ ಶೆಟ್ಟರ್ :– ನಾನು explain ಮಾಡಿ ಹೇಳುತ್ತೇನೆ. ನಾನು ಸೆಕ್ಷನ್ 19 ಹಿಂದೆ ಮಾಡಿದ್ದೆವು ಅದನ್ನು ಕೇಂದ್ರಸರ್ಕಾರದವರು ಬೇಡ ಅದನ್ನು ವಾಪಸ್ ತೆಗದುಕೊಳ್ಳಿ ಎಂದು ಹೇಳಿದ್ದಾರೆ. Indian Stamp Act ಪ್ರಕಾರ ಸೆಕ್ಷನ್ 19 ಕ್ಕೆ ನಾವು ಒಂದು ಅಮೆಂಡ್‌ಮೆಂಟ್ ಪ್ರಪೋಸ್ ಮಾಡಿದ್ದೆವು. ಬೇರೆ ರಾಜ್ಯಗಳಲ್ಲಿರತಕ್ಕಂತಹ ವ್ಯಕ್ತಿಗಳು ನಮ್ಮ ರಾಜ್ಯದಲ್ಲಿ ಬಂದು ಏನು Document ಗಳನ್ನು execute ಮಾಡಿದ್ದರು ಆ Document ಇಲ್ಲಿ ರಿಜಿಸ್ಟರ್ ಆದಾಗ ಕರ್ನಾಟಕಕ್ಕೆ ಅನ್ವಯವಾಗುವಂತಹ stamp duty ತುಂಬಬೇಕು ಎನ್ನುವಂಥಾದ್ದು ನಾವು ಹೇಳಿದ್ದೆವು. ಸೆಕ್ಷನ್ 19 include ಮಾಡಿ ಮತ್ತೆ ಬೇರೆ provision ಗಳು ಅದರಲ್ಲಿ ಇವೆ. ಕೇವಲ ಅದು ಒಂದೇ ಅಲ್ಲ. ಬೇರೆ ಬೇರೆ ಪ್ರೊವಿಸನ್‌ಗಳನ್ನು ಅದರಲ್ಲಿ ಸೇರಿಸಿದ್ದೇವೆ. ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ ಮೇಲೆ ಕೇಂದ್ರ ಸರ್ಕಾರ ಮತ್ತು ಇದ್ದಂತಹ Finance Department ನವರು Reserve Bank ನವರು ಏನು objection ಮಾಡಿದರು? ಸೆಕ್ಷನ್ 19 ರಲ್ಲಿ ನೀವು ಅಮೆಂಡ್‌ಮೆಂಟ್ ಪ್ರಪೋಸ್ ಮಾಡಿದ್ದೀರಿ ಅದು ಸರಿ ಇಲ್ಲ. ಏಕೆ ಸರಿ ಇಲ್ಲವೆಂದರೆ, ಒಂದು ರಾಜ್ಯದಲ್ಲಿ ಏನು stamp duty ತುಂಬಿರುತ್ತಾರೆ, ಅದು ಕರ್ನಾಟಕ ರಾಜ್ಯದಲ್ಲಿ execute ಆದ ಮೇಲೆ ನಿಮ್ಮಲ್ಲಿ ರಿಜಿಸ್ಟರ್‌ಗೆ ಬಂದರೆ, ಆಗ ಮತ್ತೆ ಕರ್ನಾಟಕ

ರಾಜ್ಯಕ್ಕೆ ಅನ್ವಯವಾಗುವಂತಹ stamp duty ತುಂಬುವುದಾದರೆ, ಅವರಿಗೆ ಜಾಸ್ತಿ ಏನಾಗುತ್ತದೆ. ಅದಕ್ಕೋಸ್ಕರ ಅವರು ಬೇರೆ ರಾಜ್ಯದಲ್ಲಿ stamp duty ಕಟ್ಟಿ document execute ಮಾಡಿಕೊಂಡಿರುತ್ತಾರೆ ಆ stamp duty ಯನ್ನು consider ಮಾಡಿ ನಿಮ್ಮಲ್ಲಿ ಇನ್ನು ಜಾಸ್ತಿ ಇದ್ದರೆ, balance amount ಏನು ಇರುತ್ತದೆ ಅದನ್ನು ಮಾತ್ರ ತೆಗೆದುಕೊಳ್ಳಬೇಕು ಎನ್ನುವಂಥದ್ದನ್ನು Reserve Bank of India ದವರು ಮತ್ತು Government of India ದವರು clarify ಮಾಡಿ ಈ ಸೆಕ್ಷನ್ ನಲ್ಲಿ ಏನು amendment ಗೆ proposal ಕೊಟ್ಟಿದ್ದೀರಿ ಇದು ಸರಿ ಇಲ್ಲ, withdraw ಮಾಡಿ ಎಂದು ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು explain ಮಾಡುತ್ತಿದ್ದೀರಿ. But it should be the property of the House since President of India has sent it back. ನೀವು ಏನು ಹೇಳುತ್ತಿದ್ದೀರಿ, " ನಾವು ಸೆಕ್ಷನ್ 19 ಕ್ಕೆ ಅಮೆಂಡ್‌ಮೆಂಟ್ ತಂದಿದ್ದೇವೆ, ಬೇರೆ ಬೇರೆ ಪ್ರೊವಿಸನ್ ಮಾಡಿಕೊಂಡಿದ್ದೇವೆ" ಎಂದು ಹೇಳುತ್ತಿದ್ದೀರಿ. ನೀವು ಏನು ಪ್ರೊವಿಸನ್ ಮಾಡಿಕೊಂಡಿದ್ದೀರಿ, ಅದಕ್ಕೆ ಏನು ಅಮೆಂಡ್‌ಮೆಂಟ್ ತಂದಿದ್ದೀರಿ ಎಂದು ಹೇಳಬೇಕು. ಸೆಕ್ಷನ್ 19 ಕ್ಕೆ ನಾವು ಅಮೆಂಡ್‌ಮೆಂಟ್ ಮಾಡಿ ಪ್ರೊವಿಸನ್ ಮಾಡಿಕೊಂಡಿದ್ದೇವೆ ಎಂದು ಹೇಳಿದಿರಿ. ಅದರ ಜೊತೆಗೆ ಬೇರೆ ಬೇರೆ ಪ್ರೊವಿಸನ್ ಮಾಡಿದ್ದೇವೆ ಎಂದು ಹೇಳಿದಿರಿ. ಸೆಕ್ಷನ್ 19 ಕ್ಕೆ ನೀವು ಏನು ಪ್ರೊವಿಸನ್ ಮಾಡಿಕೊಂಡಿದ್ದೀರಿ? ಇದು ಮೊದಲನೆಯದು. ಅದರ ಜೊತೆಯಲ್ಲಿ ಬೇರೆ ಬೇರೆ ಪ್ರೊವಿಸನ್ ಮಾಡಿಕೊಂಡಿದ್ದೇವೆ ಎಂದು ಹೇಳಿದಿರಿ. ಬೇರೆ ಬೇರೆ ಏನು ಮಾಡಿದ್ದೀರಿ? ಅವೆಲ್ಲಾ ಇಲ್ಲಿ ನಮ್ಮ ಮುಂದೆ place ಮಾಡದೇ, ನೀವು ಏನು ಅಮೆಂಡ್‌ಮೆಂಟ್ ತಂದಿದ್ದೀರೋ ಏನು ಇಲ್ಲವೋ ಎಂದು ನಮಗೆ ಹೇಗೆ ಗೊತ್ತಾಗಬೇಕು? 2003 ಯಲ್ಲಿ ಇಲ್ಲಿ ಬಿಲ್ ಪಾಸಾಯಿತಲ್ಲ ಆ ಬಿಲ್ ಇಲ್ಲಿ ಇಲ್ಲ. ಅದರಲ್ಲಿ ಏನು ಮಾಡಿದ್ದೀರಿ ಎಂದು ನಮಗೆ ಗೊತ್ತಿಲ್ಲ. ಅದೆಲ್ಲಾ ನೀವು ಕೊಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ತಾವು ಇಷ್ಟು ಹೇಳಿದ್ದೀರಿ. The Government of Karnataka considered the observations of the Ministry of Finance, Government of India (Banking Division) communicated vida Government of India letter dated 11-07-2003 and the points raised by the Ministry of Law of

Justice (Department of Legel Affairs) and has decided to drop the proposed amendment ot section 19 of the Karnataka Stamp Act 1957.' Points raised ಏನು? ಏನೂ ಬರೆದಿಲ್ಲ. ಮತ್ತು ಯಾವ ಸೆಕ್ಷನ್ ಎಂದು ಇಲ್ಲಿ ಹಾಕಿಲ್ಲ. ಇದು ಎಲ್ಲವನ್ನು ಇಲ್ಲಿ place ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :– ನೀವು ಹೇಳಿದ್ದೀರಿ difference collect ಮಾಡಿ ಎಂದು. You are proposing to drop. ಸಮಯ ಹಾಳು ಮಾಡುವುದು ಬೇಡ. President of India ಅವರ observation ತರಿಸಿ ಬಿಡಿ. We will go through it.

ಶ್ರೀ ಜಗದೀಶ್ ಶೆಟ್ಟರ್ :– 2003 ಯಲ್ಲಿ ಏನಿತ್ತು ಅದರ ಕಾಪಿ ಕೊಟ್ಟರೆ ನಿಮಗೆ clear ಆಗುತ್ತದೆ. ಅದು ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– Hon'ble President observation ತರಿಸಿ,

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ರಾಷ್ಟ್ರಪತಿಯವರು ಏನು objection ಮಾಡಿದರು ಎನ್ನುವುದು ಬೇಕು.

ಉಪಾಧ್ಯಕ್ಷರು :– ಮಾನ್ಯ ಜಗದೀಶ್ ಶೆಟ್ಟರ್‌ರವರೇ ಬೇರೆ ಬಿಲ್ ತೆಗೆದುಕೊಳ್ಳೋಣ.

ಆ) ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2007

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, 2007 ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸ್ಟಾಂಪು ಅಮೆಂಡ್‌ಮೆಂಟ್ ಬಿಲ್ ನಂ 9 ಈ ಬಿಲ್ಲನ್ನು ತಾವು ಪರ್ಯಾಲೋಚನೆಗಾಗಿ ಇಲ್ಲಿ ತೆಗೆದುಕೊಂಡಿದ್ದೀರಿ. ಇದರ ಮೂಲ ಉದ್ದೇಶ